ರಗಳೆ ಕವಿ ಹರಿಹರ (೧೧೮೦ – ೧೨೨೦) :

ಕನ್ನಡ ಸಾಹಿತ್ಯದ ನೂತನ ಯುಗ ಪ್ರವರ್ತಕನೆಂದು ಕೀರ್ತಿತನಾಗಿರುವ ಹರಿಹರ ದೇವನು ಹುಟ್ಟಿದುದು ಕನ್ನಡ ನಾಡಿನ ಪವಿತ್ರ ಕ್ಷೇತ್ರವಾದ ಹಂಪೆಯಲ್ಲಿ. ಮಹಾದೇವಭಟ್ಟ, ಶರ್ವಾಣಿ ಎಂಬ ಸಾತ್ವಿಕ ಶೈವ ಬ್ರಾಹ್ಮಣರು ಆತನ ತಂದೆತಾಯಿಗಳು, ರುದ್ರಾಣಿ ಎಂಬುವಳು ತಂಗಿ, ಹರಿಹರನು ಮಾಯಿದೇವರೆಂಬ ಗುರುಗಳಲ್ಲಿ ವಿದ್ಯಾಭ್ಯಾಸ ಮಾಡಿ ಉದರಂಭರಣಕ್ಕಾಗಿ, ದ್ವಾರಸಮುದ್ರದ ಹೊಯ್ಸಳರಾಜ ೨ನೇ ನರಸಿಂಹಬಲ್ಲಾಳನಲ್ಲಿ ಕರಣಿಕನಾಗಿದ್ದನು. ಅಧ್ಯಾತ್ಮಿಕ ಒಲುಮೆಯಿಂದ ಈ ವೃತ್ತಿ ತ್ಯಜಿಸಿದನೆನ್ನಲಾಗಿದೆ. ಹರಿಹರನು ಶಿವನೇ ತನ್ನ ಸರ್ವಸ್ವವೆಂದು, ಶಿವಶರಣರ ಸಂಕುಲವೇ ತನ್ನ ಬಳಗವೆಂದು ಪುರಾತನರ ತನ್ನ ಪರಮಾರಾಧ್ಯರೆಂದು ಭಾವಿಸಿ ಹಂಪೆಯ ವಿರೂಪಾಕ್ಷನ ಸನಿಹದಲ್ಲಿ ಉಪಜೀವನ ನಡೆಸಿದ ಮಹಾ ದ್ರಷ್ಟಾರ.

ಈತನು ರಚಿಸಿದ ಕೃತಿಗಳೆಂದರೆ **ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ಗಿರಿಜಾಕಲ್ಯಾಣ, ಶಿವಶರಣರ ರಗಳೆಗಳು.** ಕನ್ನಡದಲ್ಲಿ ರಗಳೆ ಕಾವ್ಯ ಪ್ರಕಾರವನ್ನು ಜೀವಂತಗೊಳಿಸಿ **'ರಗಳೆಕವಿ'** ಎಂಬ ಅನ್ವರ್ಥಕಕ್ಕೆ ಭಾಜನನಾಗಿದ್ದಾನೆ. ಆತನು ತನ್ನ ಶತಕಗಳಲ್ಲಿ ಒಂದಾದ ಪಂಪಾಶತಕದಲ್ಲಿ ರಾಜ ಸೇವೆಯ ದುಃಸ್ಥಿತಿಯನ್ನು ಹೃದಯಸ್ಪರ್ಶಿಯಾಗಿ ಬಣ್ಣಿಸುತ್ತಾನೆ.

ಪೋಗನೆ ಪೋಪ ಬಾರೆಲವೋ ಬಾರನೆ ಜೀಯ ! ಹಸಾದಮೆಂದುಬೆ ಳ್ಳಾಗುತೆ ಬರ್ಪ----

---------- ಕರುಣಾಕರ ಕಂಪೆಯೊಳ್ವನೇ !

ಮುಂದೆ ಅದರಲ್ಲಿಯೇ ತನ್ನ ಜೀವನದ ಆದರ್ಶವನ್ನು ಹೀಗೆ ಎತ್ತಿಹಿಡಿದಿದ್ದಾನೆ.

ಮನುಜನ ಮೇಲೆ, ಸಾವವರಮೇಲೆ, ಕನಿಷ್ಠರ ಮೇಲೆ ಪದ್ಯಮಂ ತನತನಗಿಂದ್ರ, ಚಂದ್ರ, ರವಿ,
ಕರ್ಣ-------------- ಕಡುಸೊಂಪಿನ ಪೆಂಪಿನ ಹಂಪೆಯಾಳ್ವನಂ.

ಈ ಉದಾಹರಣೆ ನೋಡಿದಾಗ ಹರಿಹರಯುಗವನ್ನು 'ಸ್ವತಂತ್ರಯುಗ' ವೆಂದು ಕರೆಯುವ ರೂಢಿ ಬಂದಿದೆ.

ಈತನ 'ಗಿರಿಜಾಕಲ್ಯಾಣ'ವು ಚಂಪೂಕೃತಿ ಹಾಗೂ ಮೊದಲ ಕೃತಿಯಾಗಿದೆ. ಹರಿಹರನ ಪ್ರತಿಭೆ ಪಾಂಡಿತ್ಯಗಳ ಧ್ಯೋತಕವಾದ ಅಮೂಲ್ಯ ಕೃತಿ. ಇದರಲ್ಲಿ ಶಿವಪುರಾಣಕ್ಕೆ ಸಂಬಂಧಿಸಿದ ಕೃತಿಯಾಗಿ ಮನ್ಮಥ ಸಂಹಾರ, ರತಿ ವಿಲಾಸ, ದಕ್ಷ ಯಜ್ಞ ಇತ್ಯಾದಿ ಮಹತ್ವ ಘಟ್ಟಗಳಿವೆ. ಕಥಾವಸ್ತು 'ರಚನೆ' ವರ್ಣನೆ, ಶೈಲಿಯಲ್ಲಿ ಪೂರ್ವ ಪರಂಪರೆಯ ಅಂಶಗಳನ್ನು ಸ್ವೀಕರಿಸಿ, ಸ್ವಂತಿಕೆಯನ್ನು ಮೆರೆದಿದ್ದಾನೆ. ಕನ್ನಡ ಚಂಪೂ ಕಾವ್ಯಗಳಲ್ಲಿ ಕಾಣದ ಅಪೂರ್ವ ಕಥಾ ವಿಷಯವನ್ನೊಳಗೊಂಡಿದೆ.

Scanned with CamScanner

'ಗಿರಿಜಾಕಲ್ಯಾಣ' ದಲ್ಲಿ ಕಥಾನಾಯಕಿ 'ಗಿರಜೆ' ಈ ಕಾವ್ಯ ಗಿರಿಜೆಯ ಬಾಳ ಕಥೆ ಉಳಿದ ಪಾತ್ರಗಳೆಲ್ಲ ಶಿವನ ಪಾತ್ರ ಕೂಡಾ ಕಥಾನಾಯಕಿಯ ಪಾತ್ರ ಪೋಷಣೆಗೆ ಸಹಾಯಕವಾಗಿವೆ.

ಹರಿಹರ ಕವಿ 'ಗಿರಿಜಾಕಲ್ಯಾಣ'ವು ಸುಂದರವಾದ ಒಂದು ಚಂಪೂ ಕೃತಿ ನಿಜ. ಆದರೆ ಹರಿಹರರನ್ನು ಯುಗಪುರುಷನ ಪಟ್ಟಕ್ಕೇರಿಸಿದುದು ಆತನ **"ಶಿವಶರಣರ ರಗಳೆಗಳು"** ಎಂಬುದು ರಗಳೆಗಳಿಂದ ತಿಳಿದುಬರುತ್ತದೆ. ಹರಿಹರನು ಪ್ರಾಸಸ್ಥಾನದಲ್ಲಿ ರಳ, ಕುಳ, ಕ್ಷಳಗಳನ್ನು ಬೆರೆಸಬಾರದೆಂಬುದು ಒಂದು ಛಂದೋನಿಯಮವನ್ನು ನಾನು ಪಾಲಿಸುವದಿಲ್ಲ ಎಂದು ಕವಿ ಘಂಟಾ ಘೋಷವಾಗಿ ಹೇಳುತ್ತಾನೆ.

ಉದಾ: **ನೋಡು ವೊಡೊಂದಕ್ಕರಮದು ! ಮಾಡುವೊಡುಚ್ಚರಣೆ ಗರಿದು ಮಾರುತೆರನುಂ**

ಕೊಡೆ ಕವಿತತಿ ಪಚಾರಿಸಿ ! ಬೇಡದರಿಂ ರಳಕುಳ ಕ್ಷಳಂಗಳನಿದರೊಳ್.

ಹರಿಹರನ ಹೆಸರನ್ನು ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಗೊಳಿಸಿರುವುದು ಆತ ರಚಿಸಿರುವ ರಗಳೆಗಳ ಮೂಲಕ. ಈ ಶಿವಗಣದ ರಗಳೆಗಳು ಹರಿಹರನ ವ್ಯಕ್ತಿತ್ವ ಸಿದ್ಧಿಯ ಪತಾಕೆಗಳು ೬೩ ಪುರಾತನರ ಅಂದರೆ **'ಪೆರಿಯಾ ಪುರಾಣ'** ದಲ್ಲಿ ಹೆಸರಿಸಿದ ತಮಿಳುನಾಡಿನ ಶಿವಭಕ್ತರ ಕಥೆಗಳು ಇತರೆ ಶಿವಭಕ್ತರ ಕಥೆಗಳು ಅಲ್ಲದೆ **'ಪುಷ್ಪರಗಳೆ'** ಯಂತಹ ಚರಿತ್ರವಲ್ಲದ ವರ್ಣನಾಮಯ ಭಾವಸದೃಶದ ಅಖಂಡವಾಹಿನಿಯ ರಗಳೆಯನ್ನು ಮೊದಲು ರಚಿಸಿದನೆಂಬ ಕೀರ್ತಿ ಸಲ್ಲುತ್ತದೆ. ಇಂತಹ ರಗಳೆಗಳಲ್ಲಿ ಮೌಲಿಕವಾದ, ಶ್ರೇಷ್ಠವಾದ ರಗಳೆ ಎಂದರೆ ಬಸವರಾಜ ದೇವರ ರಗಳೆ ಆಗಿದೆ. ಬಸವಣ್ಣನ ಬಾಹ್ಯ ಚರಿತ್ರೆಗಿಂತ ಅಂತರಂಗ ಭಕ್ತಿಯ ಪಾರಮ್ಯತೆಯ ರಸ ಚಿತ್ರವನ್ನು ಹರಿಹರನು ಭಾವ ಚಿತ್ರ ಸ್ಥಿತಿಯ ತನ್ಮಯತೆಯೊಂದಿಗೆ ನೀಡಿದ್ದಾನೆ. ಹಳಗನ್ನಡದಿಂದ ಹೊಸಗನ್ನಡಕ್ಕೆ ಸಂಕ್ರಮಣ ಹೊಂದುವ ಕಾಲದ ಪ್ರಾಯೋಗಿಕ ಶೈಲಿಯ ಸಂಕೀರ್ಣತೆ ಮತ್ತು ಹಳಗನ್ನಡದಲ್ಲಿದ್ದ ರಳ, ಕುಳ, ಕ್ಷಳಗಳ ವರ್ಜನೆ ಪ್ರಾಸ ನಿಯಮ ತಿರಷ್ಕರಣೆ ಈತನ ಅದ್ಭುತಸಾಧನೆಯೆನ್ನಬಹುದು.

ಈತನು ಸುಮಾರು ೧೦೬ ರಗಳೆಗಳನ್ನು ರಚಿಸಿದ್ದಾನೆಂದು ತೋರಲಾಗಿದೆ. ಅವುಗಳಲ್ಲಿ 'ನಂಬಿಯಣ್ಣನ ರಗಳೆ, ಮಹಾದೇವಿಯಕ್ಕನ ರಗಳೆ, ರೇವಣಸಿದ್ದೇಶ್ವರ ರಗಳೆ, ಪ್ರಭು ಧೇವರ ರಗಳೆ, ತಿರುನೀಲಕಂಠ ರಗಳೆ, ಮಲುಹಣನ ರಗಳೆ,' ಒಂದೊಂದು ಬಗೆಯ ವಿಶಿಷ್ಟ ಹಾಗೂ ಪ್ರಮುಖ ರಗಳೆಗಳಾಗಿವೆ.

ಈತನೆರಡು ಶತಕಗಳು ಆತ್ಮ ಕಥನದಂತೆ ಹಂಪೆಯ ವಿರೂಪಾಕ್ಷನನ್ನು ತಿಳಿದ ಭಕ್ತಿ ಭಾವಾವೇಶವಾಗಿ, ವೀರ ನಿಷ್ಠೆಯಾಗಿ ಅವುಗಳಲ್ಲಿ ಹೊರ ಹೊಮ್ಮಿದೆ ; ಸಂಸಾರಭಾವ, ರಾಜಸೇವೆಯಿಂದ ಮುಕ್ತನಾಗಿ ಭಕ್ತ ಸೇವೆಗೆ ಮೀಸಲಾದುದರ ಸೂಚನೆಯಾಗಿದೆ.

ರಾಘವಾಂಕ :

ಹರಿಹರನ ಕವಿ ಪುಣ್ಯಶಾಲಿ, ಆದ್ದರಿಂದಲೇ 'ಶಿಷ್ಯಾದಿ ಚ್ಛೇತ್ ಪರಾಜಯಂ' ಎಂಬ ಸೂಕ್ತಿ ಸಾರ್ಥಕವಾಗುವಂತೆ ಆತನ ಸೋದರಳಿಯ ರಾಘವಾಂಕ ಆತನಿಗೆ ಶಿಷ್ಯನಾಗಿ ದೊರೆತ. ರಾಘವಾಂಕನು 'ಚತುರ ಕವಿರಾಯ' 'ಹಂಪೆಯ ಹರೀಶ್ವರನ ವರಸುತನು' ಹರಿಹರನ ಕಾವ್ಯರಚನೆಯ ಹಾದಿಹಿಡಿದು **'ಕ್ರಾಂತಿಕವಿ' 'ಷಟ್ಪದಿಯ ಬ್ರಹ್ಮ'** ಎಂದೆನಿಸಿಕೊಂಡಿರುವ ರಾಘವಾಂಕ ಕನ್ನಡ ಸಾಹಿತ್ಯ ಚರಿತ್ರೆಯ ಇತಿಹಾಸದಲ್ಲೇ ಬಿನ್ನ ಹಾಗೂ ವಿಶಿಷ್ಟ ವ್ಯಕ್ತಿತ್ವವುಳ್ಳವನಾಗಿದ್ದಾನೆ. ಈತನು ಹರಿಹರನ ಸೋದರಳಿಯ ಹಾಗೂ ಪಟ್ಟ ಶಿಷ್ಯನಾಗಿದ್ದಾನೆ. ಈತನಿಗೆ **'ಉಭಯ ಕವಿ ಕಮಲ ರವಿ'** **'ಕವಿಶರಭಬೇರುಂಡ, ಅದಟ ಕವಿ,** **'ಹಂಪೆಯರಸನ ನಿಕರಚದಂತ'** ಇತ್ಯಾದಿ ಬಿರುದಗಳಿದ್ದು **'ಮಹಾದೇವಭಟ್ಟ'** ಮತ್ತು **'ರುದ್ರಾಣಿ'** ಎಂಬ ದಂಪತಿಗಳ ಸುಪುತ್ರನಾಗಿದ್ದಾನೆ. **ಮನನಿಜಾರಿಯ ಭಕ್ತನಲ್ಲ'** ಎಂಬ ಹರಿಹರ ಮಾರ್ಗದ **ಪೊಗಟ್ಟನಾಲಗೆಯೊಳ್'** ಅನ್ಯದೈವದ ಭವಿಗಳು **ಕೀರ್ತಿಸಿದೆನಾದೊಡೆ** ಗುರಿನಿರೂಪಣೆಯ ಬಗೆಗೆ ಸ್ಫೂರ್ತಿದೊರತಿದೆ. ಹೆಗ್ಗುರತು, ರಾಘವಾಂಕನ ಕಾವ್ಯ, ವಸ್ತು, ಉದ್ದೇಶ, ಧ್ಯೇಯ, ಧೋರಣೆ ಭಾವಗಳ ವಿದ್ಯುದಾಲಿಂಗನಗಳ ಆದರೂ ಕಾವ್ಯರೂಪ, ಕಥಾವಸ್ತು, ನಿರೂಪಣೆಯ ವಿಧಾನ, ಶೈಲಿಯಲ್ಲಿ ಅವನ ಬುದ್ಧಿ – ಸಮಾಗಮ ಸ್ವತಂತ್ರವಾಗಿರುವುದೊಂದು ಹೆಗ್ಗಳಿಕೆಯಾಗಿದೆ. ಈತ ಪಂಡಿತೋತ್ತಮನಾದರೂ ಹರಿಹರನಂತೆ ಪ್ರತಿಭಾ ಪ್ರದರ್ಶನಕ್ಕಾಗಿ ಚಂಪೂ ಮೋಹದ ಬಲೆಗೆ ಬೀಳುವ ಅಟ್ಟಹಾಸಕ್ಕೆ ಹೋಗಲ್ಲಿಲ್ಲ. ತನ್ನೆಲ್ಲ ಗ್ರಂಥಗಳನ್ನು ಸಹಜ ದೇಸಿ ರೂಪಭೇಧವಾದ 'ಷಟ್ಪದಿ' ಯಲ್ಲಿಯೇ ಕಾವ್ಯ ರಚಿಸಿದ್ದಾನೆ. ರಾಘವಾಂಕನು ಒಟ್ಟು ಆರು ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ 'ಸೋಮನಾಥ ಚರಿತೆ' 'ಹರಿಶ್ಚಂದ್ರ ಕಾವ್ಯ' 'ವೀರೇಶ ಚರಿತೆ' 'ಸಿದ್ದರಾಮ ಪುರಾಣ' ಎಂಬ ನಾಲ್ಕು ಕೃತಿಗಳು ಉಪಲಬ್ದವಾಗಿದ್ದು 'ಶರಭ ಚರಿತ್ರ' ದೊರೆತಿದ್ದು ಪ್ರಕಟವಾಗಿಲ್ಲ. ಹರಿಹರ ಮಹತ್ವವು ಇದುವರೆಗೂ ಲಭ್ಯವಾಗಿಲ್ಲ. 'ವೀರೇಶ ಚರಿತೆ'ಯು ೧೨೭ ಪದ್ಯ ಮತ್ತು ೨ ಸಂಧಿಗಳ ಚಿಕ್ಕ ಕಾವ್ಯ. ಇದರಲ್ಲಿ ವೀರಭದ್ರನು ದಕ್ಷಾಧ್ವಜರನ್ನು ಧ್ವಂಸ ಮಾಡಿದ ಕಥೆಯೊಳಗೊಂಡಿದೆ. ಇದೊಂದು ರಾಘವಾಂಕನ ಮೀಸಲುಗವಿತೆ ಆಗಿದೆ. ಇದರ ಮೇಲೆ ಹರಿಹರನ, ವೀರಭದ್ರ ದೇವರ ರಗಳೆಯಲ್ಲಿ ಶಿವನ ಸಭೆಯು ರಾಗರಸದಲ್ಲಿ ಮುಳುಗಿದಾಗ ದಕ್ಷನು ಬಂದು ನಿಲ್ಲಲು ಕರೆಗೊರಲನು ಅವನನ್ನು ನೋಡದೆ ತನ್ನ ಸುಖದಲ್ಲಿ ಮುಳಗಿ ನಿಲ್ಲುತ್ತಾನೆ. ಅಗ ಅಳಿಯ ತನ್ನನ್ನು ಮನ್ನಿಸಲಿಲ್ಲವೆಂದು ದಕ್ಷ ಮುಳಿದು ಹೋಗುವ ಕಥಾ ಸನ್ನಿವೇಶ ರಾಘವಾಂಕನಲ್ಲೂ ಸಹಜತೆಯಿಂದ ಸ್ವತಂತ್ರಗೊಂಡು ರೂಪಿತಗೊಂಡಿದೆ. ಇದು ವಾರ್ಧಕ ಷಟ್ಪದಿಯಂತೆಯೇ ಇದ್ದು 'ಉದ್ದಂಡ ಷಟ್ಪದಿ' ಎಂಬ ಪರ್ಯಾಯಾಂಕಿತವಿದೆ.

Scanned with CamScanner

'ಸೋಮನಾಥ ಚರಿತೆ' ಯು ಅಧ್ಯಯನ ಚರಿತೆ ಆಗಿದೆ. ಸೌರಾಷ್ಟ್ರದ ಶಿವಭಕ್ತನಾದ ಆದಯ್ಯನು ಪುಲಗೆರೆಗೆ ಬಂದು ಸೌರಾಷ್ಟ್ರದ ಸೋಮನಾಥನನ್ನು ಪ್ರತಿಷ್ಠಾಪಿಸಿ ಪವಾಡ ಮೆರೆದು ಜೈನರನ್ನು ಶಿವಭಕ್ತರನ್ನಾಗಿಸಿದ ಕಥೆಯಿದೆ. ಇದರ ಪ್ರೇರಣೆ ಪ್ರಭಾವ ಹರಿಹರನ ಅಧ್ಯಯನ ರಗಳೆ ಆಗಿದೆ. ಈತನು ಸೌರಾಷ್ಟ್ರಪುರದ ಹರದತ್ತ – ಪುಣ್ಯವತಿಯರ ಮಗನಾಗಿ ಜನಿಸುತ್ತಾನೆ. ಅಲ್ಲಿಯ ಪದ್ಮಾವತಿಯೊಡನೆ ಪ್ರಣಯ ಸಂಬಂಧದಲ್ಲಿ ತನ್ನ ಹೆಂಡತಿಯ ಸ್ಮರಣೆಯಲ್ಲಿದ್ದು ಜೈನಳಾಗಿದ್ದ ಪದ್ಮಾವತಿಯನ್ನು ಶಿವಶರಣೆಯನ್ನಾಗಿಸುತ್ತಾನೆ.

'ಸಿದ್ಧರಾಮ ಚಾರಿತ್ರ' ವು ೯ ಸಂಧಿಗಳುಳ್ಳ ಕಾವ್ಯ. ಇದರ ವಸ್ತು ಸೊನ್ನಲಿಗೆಯ ಸಿದ್ಧರಾಮನ ಚಾರಿತ್ರ "ಜಗದ್ಗುರು ಸಿದ್ಧರಾಮನಾಥಂ ಮನುಜನಲ್ಲಿ ಕಾರಣ ರುದ್ರ" ನಾದ ಸಿದ್ಧರಾಮನ ಜನನ, ಬಾಲ್ಯ, ಸಿದ್ಧಕರ್ಮಯೋಗಿಯಾದ ಸಿದ್ಧರಾಮನ ವ್ಯಕ್ತಿತ್ವವನ್ನು ವೈಶಾಲ್ಯವಾಗಿ ವಿವರಿಸುವ ಬೆಲೆ ಕಟ್ಟುವ ಕೃತಿಯಾಗಿದೆ. ಅವನು ವಿಶ್ವಕುಟುಂಬಿಯಾಗಿ, ಕೆರೆ – ಗುಡಿ, ತೋಟಗಳನ್ನು ನಿರ್ಮಿಸುತ್ತಾ ವಿಷಜಂತು ಪಾತಕಿ ನಾಶಕಿಗಳನ್ನು ಉದ್ಧರಿಸುತ್ತಾ ಬಾಳಿದ ಪವಾಡ ಪುರುಷನೆಂಬ ಚರಿತ್ರೆ ಈ ಕೃತಿಯಲ್ಲಿ ಬಂದಿದೆ.

ರಾಘವಾಂಕನ **'ಹರಿಶ್ಚಂದ್ರ ಕಾವ್ಯ'** ಲೌಕಿಕ ಸಂಪ್ರದಾಯದ ಕೃತಿ, ಸಂಸ್ಕೃತದ **'ಚಂಡಕೌಶಿಕ'** ನಾಟಕದಿಂದ ಪ್ರೇರಣೆಗೊಂಡಿದೆ. ಇದು ರಾಘವಾಂಕನ ಕಾವ್ಯ ಸಿದ್ಧಿಯ ಹೆಗ್ಗುರುತಾಗಿದೆ. ಅವನ ಶಕ್ತಿ ವಿಶೇಷಗಳೆಲ್ಲವೂ ಇದರಲ್ಲಿ ತೆನಿಗೊಂಡು ಮೇಳೈಸಿವೆ. ಹರಿಶ್ಚಂದ್ರ ಕಥೆ ಪುರಾಣ, ವೇದಗಳಲ್ಲಿ ಸುಪ್ರಸಿದ್ಧವಾದುದು. **"ಈ ಕಥಾಬೀಜಮೀಬೀಜಮಂ ಬತ್ತಿ ಬಳಸಿದಪೆನಾ ಕಾವ್ಯ ವೃಕ್ಷಂ ಎಂಬಂತೆ"** ಅವನೆ ಪೂರ್ವಪರಂಪರೆಯ ಕಥೆಯನ್ನು ಎತ್ತಿ ತಂದಿದ್ದರ ವಿವರಣೆ ನೀಡುತ್ತಾನೆ. 'ಹರಿಶ್ಚಂದ್ರ ಕಾವ್ಯ' ವು ರನ್ನನ 'ಗದಾಯುದ್ಧ' ದಂತೆ ತನ್ನ ಕಾವ್ಯದ ಚೌಕಟ್ಟಿನಲ್ಲಿ ನಾಟಕವೊಂದನ್ನು ಹೊತ್ತು ಕುಳಿತಿರುವ ಕೃತಿ. ಗದಾಯುದ್ಧದಂತೆ ಅಲ್ಪಸ್ವಲ್ಪ ಬದಲಾವಣೆಗಳೊಡನೆ ನಾಟಕವಾಗಿ ಪರಿವರ್ತಿಸಬಹುದು. ಪರಿವರ್ತಿಸಲಾಗಿ ಈ ಕಾವ್ಯರೂಪದ ನಾಟಕ ಪ್ರಾರಂಭವಾಗುವುದು ಮಂಗಳಕರವಾದ ದೇವೇಂದ್ರನ ಆಸ್ಥಾನದ ದೃಶ್ಯದಿಂದ, ಅಲ್ಲಿ ಹರಿಶ್ಚಂದ್ರನು ಪರಮ ಸತ್ಯವಂತನೆಂದು ವಸಿಷ್ಠ ಹೇಳಿದುದೇ ನೆಪವಾಗಿ ವಸಿಷ್ಠ ವಿಶ್ವಾಮಿತ್ರರಲ್ಲಿ ವಾಗ್ವಾದ ನಡೆದು ಮುಂದೆ ನಡೆಯಬೇಕಾದ ಕಥೆಗೆ ಅಸ್ತಿಬಾರ ಹಾಕಿದಂತಾಗುತ್ತದೆ. **'ಕೋಣನೆರಡುಂ ಹೋರಿಗಿಡುವಿಂಗೆಮಿತ್ತು'** ಎಂಬಂತೆ ವಸಿಷ್ಠ ವಿಶ್ವಾಮಿತ್ರರ ಜಗಳ ಹರಿಶ್ಚಂದ್ರನ ಕಷ್ಟಕ್ಕೆ ಮೂಲವಾಗುತ್ತದೆ.

ಒಟ್ಟಾರೆ ಹರಿಶ್ಚಂದ್ರ ಕಾವ್ಯ ರಾಘವಾಂಕನ ಮಹಾಕೃತಿ. ಅವನ ಧಾರ್ಮಿಕತೆಯನ್ನು ಮೀರಿಬಂದ ಅಲೌಕಿಕವಾದ ಲೌಕಿಕಕಾವ್ಯ. ಇದರ ವಸ್ತು, ರಚನೆ, ಪಾತ್ರ, ಪೋಷಣೆ, ರಸನಿರೂಪಣೆ, ಸಂವಾದ ರಚನೆ ವರ್ಣಿಸಿ ಯಾವ ಮಗ್ಗುಲಿನಿಂದ ನೋಡಿದರೂ ಈ ಕೃತಿ ರುದ್ರನಾಟಕದ ರುದ್ರ ಅಂಶಗಳನ್ನು ಅಡಕಗೊಳಿಸಿಕೊಂಡ ಭದ್ರನಾಟಕವೇ ಆಗಿದೆ. ಇದೆ ಕಡೆತನಕ ಬಂದ ಲೇಸು 'ಖಳನಾಯಕನಂತಿದ್ದ ವಿಶ್ವಾಮಿತ್ರನು ಕೊನೆಗೆ ಪರಿವರ್ತನೆ ಹೊಂದಿದ್ದು ಆಕಸ್ಮಿಕವಾಗಿದೆ. ಹೀಗೆ 'ಸತ್ಯವೆಂಬುದೆ ಹರ, ಹರನೆಂಬುದೇ ಸತ್ಯ' ಎಂಬ ದಿವ್ಯ ಸಾರಾಮೃತ ಮಂತ್ರದ ಪಠನದ ಸಾರ್ಥಕ್ಯ ವ್ಯಕ್ತವಾಗಿದೆ. ಈ ಕಾವ್ಯದ ಚಂದ್ರಮತಿಯ ಪುತ್ರ ವಿಲಾಪ ಕನ್ನಡ ಸಾಹಿತ್ಯ ರಸಘಟ್ಟಗಳಲ್ಲೊಂದು ಭಾರತೀಯ ಬದುಕಿನ ಮೌಲ್ಯವಾದ ಸತ್ಯಸಂಧತೆಗೆ ಈ ಕಾವ್ಯ ಸರ್ವಾಂತರ್ಯಾಮಿ ನಿದರ್ಶನವಾಗಿದೆ.

'ಶರಭಚಾರಿತ್ರ' ದಲ್ಲಿ ಹಿರಣ್ಯಕಶ್ಯಪುವಿನ ರಕ್ತಪಾನದಿಂದ ಮತ್ತನಾದ ನರಸಿಂಹನನ್ನು ವೀರಭದ್ರನು ಶರಭಾಕಾರದಿಂದ ಶಿಕ್ಷಿಸಿದ ಕಥೆಯಿದೆಯೆಂದು 'ಹರಿಹರ ಮಹತ್ವ' ದಲ್ಲಿ ಹಂಪೆಯ ವಿರೂಪಾಕ್ಷನ ಮಹಾತ್ಮದ ಬಹುರಂಜಿತ ವರ್ಣನೆಯಿದೆಯೆಂದು **'ಸಿದ್ಧನಂಜೇಶನ' 'ರಾಘುವಾಂಕ ಚಾರಿತ್ರ' ದಿಂದ ತಿಳಿದುಬರುತ್ತದೆ. ರಾಘವಾಂಕನ ಶೈಲಿಯ ಮಾರ್ಗಕಾವ್ಯ ಮತ್ತು ಹರಿಹರ ಮಾರ್ಗಗಳೆರಡು ಪಾಕಗಳಲ್ಲಿ ವಿಶಿಷ್ಟ ಕಾಂತಿ ಪಡೆದಿವೆ. ಮಾರ್ಗ ಕಾವ್ಯದ ಸಂಸ್ಕೃತ ವ್ಯಾಮೋಹ, ಅಲಂಕಾರ ಮೋಹ. ಈ ಶೈಲಿಯಲ್ಲಿ ಹೆಣೆಯಿಕ್ಕಿವರೂ ಪ್ರಸನ್ನ, ಪ್ರವಾಹ ಸಂಯಮಿತವಾದ ಸ್ವರೂಪವೇ ಇದರ ಮೂಲರೂಪ. ಇದರಲ್ಲಿ ನಾಟಕೀಯವಾದ ಸಂಭಾಷಣೆ, ಅಭಿನಯದ ಹಾವಭಾವ ರಂಗಸಜ್ಜಿಕೆಗನುಗುಣ ಸೂಚನೆಯ ಚಿತ್ರ ನಿರ್ಮಾಣ ಇವುಗಳಿಲ್ಲದ ಸಂಪನ್ನ ನಾಟ್ಯಗುಣ ಪ್ರಕಟವಾಗಿದೆ".** ಮಾರ್ಗಕಾವ್ಯದ ಎಲ್ಲಗುಣಗಳು ರಾಘವಾಂಕನಲ್ಲಿದ್ದರೂ ತನ್ನದೇ ಆದ ಸ್ವಂತಿಕೆಯನ್ನು ಕಾವ್ಯ ಶೈಲಿ, ನಾಟಕೀಯತೆ, ಅಚ್ಚಗನ್ನಡ ಛಂದಸ್ಸಿನಿಂದ ಮೆರೆದಿದ್ದಾನೆ. ಹರಿಹರನಂತೆ ಗದ್ಯವನ್ನು ವಿಶಿಷ್ಟವಾಗಿ ಬಳಸಿಕೊಂಡಿಲ್ಲ. ಅಚ್ಚಕನ್ನಡ ದತ್ತ ಕವಿಯ ಒಲವಿದೆ ರಾಘವಾಂಕನ ಕಾವ್ಯ ಸರ್ವಜನಾದರಣೀಯವಾದುದು ಎಂದು ಎಸ್. ವಿ. ರಂಗಣ್ಣನವರು ಅಭಿಪ್ರಾಯಪಟ್ಟಿದ್ದಾರೆ.

ಕುಮಾರ ವ್ಯಾಸ (ಕ್ರಿ. ಶ. ೧೪೩೦) :

ಕುಮಾರವ್ಯಾಸನು ೧೫ನೇ ಶತಮಾನದ ಪೂರ್ವಾರ್ಧದಲ್ಲಿದ್ದ ಮಹಾಕವಿ ವಿಜಯನಗರ ರಾಜರ ಸಮಕಾಲೀನರಾಗಿ ಕರ್ನಾಟಕ ರಾಮರಾವಣರ ಕಾಲದ ಕನ್ನಡ ಸಾಹಿತ್ಯಕ್ಕೆ ವಿಶೇಷವಾದ ಖ್ಯಾತಿಯನ್ನು ತಂದು ಕೊಟ್ಟವನು. ಈತನ ಕಾಲ ಹಾಗೂ ಮತದ ವಿಚಾರಗಳು ವಾದ ವಿವಾದಕ್ಕೆ ಗ್ರಾಸವಾಗಿವೆ. ಕುವೆಂಪು ಹೇಳಿರುವಂತೆ.

'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು.
ಭಾರತ ಕಣ್ಣಲಿ ಕುಣಿಯುವುದು
ಮೈಯಲ್ಲಿ ಮಿಂಚಿನ ಹೊಳೆ ತುಳುಕಾಡುವುದು.

Scanned with CamScanner

ಈತನ ನಿಜನಾಮ ನಾರಣಪ್ಪ. ಗದಗ ಪ್ರಾಂತದ ಕೋಳಿವಾಡ ಈತನ ಊರು. ಈತನ ಆರಾಧ್ಯ ದೈವ ಗದುಗಿನ ವೀರ ನಾರಾಯಣ. 'ವೀರ ನಾರಾಯಣ' ಕವಿ ಕುಮಾರವ್ಯಾಸ **ಲಿಪಿಕಾರನೆಂಬ** ತನ್ನ ದೈವದ ಪ್ರೇರಣೆ ಸ್ಫೂರ್ತಿ ವಿನಯ ವಿಧೇಯತೆಯ ಸಮರ್ಪಣ ಭಾವ ಮೆಚ್ಚುವಂಥದ್ದು ಜೊತೆಗೆ ಕವಿ ತನ್ನನ್ನು **'ಕುಮಾರವ್ಯಾಸಯೋಗೀಂದ್ರ' 'ಕುಮಾರವ್ಯಾಸಮುನಿ' 'ಶಠಕೋಪ'** ಎಂದು ಕರೆದು ಕೊಂಡಿರುವುದರಿಂದ ಆತನು ಸನ್ಯಾಸಿಯಾಗಿದ್ದನೆಂದು ಊಹಿಸುವುದಕ್ಕೆ ಅವಕಾಶವಿದೆ. **'ಕುಮಾರವ್ಯಾಸಭಾರತ' 'ಗದುಗಿನಭಾರತ' 'ಕನ್ನಡ ಭಾರತ' 'ಕರ್ನಾಟಕಭಾರತ'** ವೆಂದು ರೂಪವಾಗಿರುವ **'ಕರ್ನಾಟ ಭಾರತ ಕಥಾ ಮಂಜರಿಯು'** ಈತನ ಕೃತಿಯಾಗಿದೆ. ಇದು ಸಂಸ್ಕೃತ ವ್ಯಾಸಭಾರತದ ಹತ್ತು ಪರ್ವಗಳ ಕಥೆಯ ಸ್ವತಂತ್ರ ಅನುವಾದವಾಗಿದೆ. ವ್ಯಾಸಭಾರತವನ್ನು ಮೊಟ್ಟಮೊದಲು ಕನ್ನಡಕ್ಕೆ ತಂದು ಕೊಟ್ಟವನು. ಆದಿಕವಿ ಪಂಪನಷ್ಟೆ ದಿವ್ಯ ಪ್ರತಿಭೆಯ ಆ ಕವಿ ಬರೆದ ಕಾವ್ಯವನ್ನೇ ಮತ್ತೆ ಬರೆವವನಿಗೆ ಎಂಟೆದೆಯೆ ಇರಬೇಕು. ಕುಮಾರವ್ಯಾಸನಿಗೆ ಎಂಟೆದೆಯಿಲ್ಲ ಎಂಬು ? ಇಬ್ಬರೂ ಮಹಾಕವಿಗಳು. ವರಕವಿಗಳು ಆದರೆ ಅವರಿಬ್ಬರ ನಿಲುವು ಬೇರೆ ಬೇರೆ. ಪಂಪ ವೀರಯುಗದವನು ಆತನ ಕಾವ್ಯದಲ್ಲಿ ವೀರರಸ ಸೂರೆಗೊಟ್ಟು ಹರಿಯುತ್ತದೆ : ಕುಮಾರವ್ಯಾಸನು ಭಕ್ತಿಯುಗದವನು. ಆತನ ಕಾವ್ಯದಲ್ಲಿ ಭಕ್ತಿರಸ ಹೆಪ್ಪುಗಟ್ಟಿ ಕುಳಿತಿದೆ. ಪಂಪಭಾರತದ ನಾಯಕ ಅರ್ಜುನನ ವೇಷಧರಿಸಿದ ಅರಿಕೇಸರಿ ಆದರೆ ಕುಮಾರವ್ಯಾಸ ನಾಯಕ ಕೃಷ್ಣ. ಪಂಪನ ಸಭಾಸದರು ಆಸ್ಥಾನವಿದ್ವಾಂಸರು. ಕುಮಾರವ್ಯಾಸನ ಶ್ರೋತೃಗಳು ಜಂಗಮ - ಜನಾರ್ಧನರು ; ಪಂಪನದು ರಾಜಗಾಂಭೀರ್ಯ ಮಾತನಾಡಿದರೆ ಮುತ್ತು ಸುರಿದಿತು ; ಕುಮಾರವ್ಯಾಸ ಜನರಿಗೆ ಅರ್ಥವಾಗುವಂತೆ ಹಿಗ್ಗಲಿಸಿ ಬರೆದವನು. ಕುಮಾರವ್ಯಾಸನ ಭಾರತ - ಪಂಪ ಭಾರತದ ನಾಲ್ಕರಷ್ಟಿದೆ. ಪಂಪನಿಗೆ ಲೌಕಿಕ ಕಾವ್ಯವಾಗಿರುವುದು ಕುಮಾರವ್ಯಾಸನಲ್ಲಿ 'ಸಂಸಾರದುರಿತಾಂಕುರದ ಬೇರಿನ ಬೇಗೆ :

ಸಮಗ್ರ ಭಾರತ ಕಥೆಯನ್ನು ಪಂಪನ ತರುವಾಯ ಕನ್ನಡಕ್ಕೆ ತಂದವನು. ಕುಮಾರವ್ಯಾಸನಾಗಿದ್ದು **'ಪಂಪಭಾರತ ಕಲಿತವರ ಕಾಮಧೇನುವಾದರೆ, ಕುಮಾರವ್ಯಾಸ ಭಾರತ ಕಲಿಯದವರ ಕಾಮಧೇನು** ; ಕುಮಾರ ವ್ಯಾಸ ಭಾರತ ಮತ್ತು ಪಂಪ ಭಾರತಗಳನ್ನು ಅಮೂಲಾಗ್ರವಾಗಿ ಅಭ್ಯಸಿಸಿ ಮೂಲದ ಹದಿನೆಂಟು ಪರ್ವಗಳಲ್ಲಿ ಈತನ ಹತ್ತು ಪರ್ವಗಳನ್ನು ಬಹು ಸುಂದರವಾಗಿ ಕನ್ನಡೀಕರಿಸಿದ್ದಾನೆ. ವೇದ, ಚರಿತ್ರೆ, ಪುರಾಣ ಶಾಸ್ತ್ರಗಳಲ್ಲಿ ಬಲ್ಲಿದನಾಗಿ ಚತುರ್ಭಾಷಾ ಪಂಡಿತನಾಗಿದ್ದಾನೆ. **ಕುಮಾರವ್ಯಾಸ ಭಾರತವು ಭಾಮಿನಿ ಷಟ್ಪದಿಯಲ್ಲಿದೆ. "ತಿಳಿಯ ಹೇಳುವೆ ಕೃಷ್ಣ ಕಥೆಯನು ಇಳೆಯ ಜಾಣರು ಮೆಚ್ಚುವಂತಿರೆ ಪಂಚಮ ಶ್ರುತಿಯ ಸೊರೆವೆನು ಕೃಷ್ಣ ಮೆಚ್ಚಲಿಕೆ"** ಎಂದು ತನ್ನ ಕಾವ್ಯೋದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ. ಕುಮಾರವ್ಯಾಸನಿಗೆ ಕೃಷ್ಣಕಥೆಯೇ ಮುಖ್ಯ ಕಥಾಸಂವಿಧಾನದಲ್ಲಿ ಏಕ ಸೂತ್ರತೆಯಿದೆ ವರ್ಣನೆಗಳಲ್ಲಿ ಅಪೂರ್ವವಾದ ಕಲ್ಪನಾ ವಿಲಾಸವಿದೆ.

ಕವಿಯೇ ಈ ಪಂಚಮವೇದವೆನಿಸಿದ ಭಾರತವು ಹೇಗೆ ಸರ್ವಗ್ರಾಹ್ಯಯೆಂಬುದನ್ನು ಯುಕ್ತಾಯುಕ್ತವಾಗಿ ಹೇಳಿ ಇದನ್ನು 'ಕಾವ್ಯಕ್ಕೆಲ್ಲ ಗುರು' ಎಂದು ಗೌರವಿಸುತ್ತಾನೆ. ಇಲ್ಲಿ ಎಲ್ಲರಿಗೂ ಬೇಕಾದುದಿದೆ. ಇದು ಅಕ್ಷರಶಃ ನಿಜ: ಇದು ಬರಿ ಹೊಗಳಿಕೆಯಲ್ಲ

"ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋ:
ಗೀಶ್ವರರ ತತ್ವ ವಿಚಾರ ಮಂತ್ರಿ ಜನಕ್ಕೆ ಬುದ್ಧಿಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕ್ಕೆ
ಗುರುವಾಗಲು ರಚಿಸಿದ ಕುಮಾರ ವ್ಯಾಸ ಭಾರತವನು"

ಕುಮಾರವ್ಯಾಸನು 'ಕನ್ನಡದ ದೇಸಿಯನ್ನು' ಕಾವ್ಯದ ಉದ್ದಕ್ಕೂ ತುಂಬಿ ಅದು ನವನವ್ಯವಾಗಿ ಉದಯಿಸಿದೆ. ಕನ್ನಡ ನಾಡಿನ ಕನ್ನಡಿಗರ ಜನಜೀವನ ಚಿತ್ರಗಳು ಅವನ ಕೃತಿಯಲ್ಲಿ ಅಮರವಾಗಿವೆ.

ಅವನನ್ನು ವಿಮರ್ಶಕರು **'ರೂಪಕ ಸಾಮ್ರಾಜ್ಯದ ಚಕ್ರವರ್ತಿ'** ಎಂದು ಹೊಗಳಿರುವುದು ಸತ್ಯದ ಮಾತು. ಎಷ್ಟೋ ಮಾತುಗಳಲ್ಲಿ ವರ್ಣಿಸಿ ಸಾಧಿಸಲಾರದ ಫಲವನ್ನು ಒಂದು ಪುಟ್ಟ ರೂಪಕದಿಂದ ಕುಮಾರವ್ಯಾಸ ಸಾಧಿಸಿ ಬಿಡುವುದು ಅವನ ವೈಶಿಷ್ಟ್ಯ. **'ಭ್ರೂಲತೆಯ ಸುರಚಾಪ ಮಾತಿನ ಗಾಳ, ರೋಷ ಜ್ವಾಲೆ, ವಿಲಾಸಗಳು ಕುಣಿದಾವು, 'ಒಣಗುತಿದೆ ಕುರುವಂಶಲತೆ, ಸಿಡಿಲ ಹೊಟ್ಟೆಗಟ್ಟಿ ಸೇವಕ ! ಕೊಂಡವರೇ ಕಾರುಣ್ಯ ವರ್ಷಾಮಾಮಗಲುಗಲಿಲಿಸುರಿ, ವಿಜಯ ಪಥೂಕಚಾಕ್ಷವ ತಿರುಹಿ ಹಾಲುಟ್ಟಿನ ಗಂಡನಾದನು ಅಪಕೀರ್ತಿನಾರಿಯ ಸೆರಗಹಿಡಿದರು'**, ಮೊದಲಾದ ಮಾತುಗಳ ಆಯಾಯ ಸಂದರ್ಭದ ರಮ್ಯವನ್ನು ವಿದ್ಯುನ್ಮಯವಾಗಿಸಿವೆ.

ಕುಮಾರವ್ಯಾಸನ ಭಾರತವೆಂದರೆ ಭಿನ್ನ ಭಿನ್ನ ಸ್ವಭಾವದ ಮಾನವರ ಭಾವ ಪ್ರದರ್ಶನಾಲಯ. ಇಲ್ಲಿ ಮಾನವರು, ಧಾನವರು, ದಾನವರು, ಚಕ್ರವರ್ತಿಯಿಂದ ಹಿಡಿದು ಸೇವಕನವರೆಗೆ ಎಲ್ಲ ಮುಟ್ಟಿದವರು. ಎಲ್ಲ ಗುಣದವರು, ಮಕ್ಕಳು ಎಲ್ಲರೂ ಚಿತ್ರಿತರಾಗಿದ್ದಾರೆ.

ಕುಮಾರವ್ಯಾಸನು ಪಾತ್ರ ರಚನೆಯಲ್ಲಿ ಸಾಫಲ್ಯತೆ ಪಡೆದಂತೆ ಹೆಚ್ಚು ಕವಿಗಳು ಪಡೆಯಲಿಲ್ಲ. ಆತನ ಕೃಷ್ಣ, ಕರ್ಣ, ಅರ್ಜುನ, ಭೀಮ, ದ್ರೌಪದಿ, ಅಭಿಮನ್ಯು, ಉತ್ತರಕುಮಾರ, ಭೀಷ್ಮ, ಧುರ್ಯೋಧನ, ದ್ರೋಣ, ವಿದುರ, ಇವರುಗಳು ಚಿರಂಜೀವಿಯಾಗಿ ಕಲಿಯುಗಕ್ಕೆ ಬಂದಿರುವರು.

Scanned with CamScanner

ನಮ್ಮ ಮಧ್ಯೆ ಸಂಚರಿಸುವವರು, ನಾಡಿನ ಜನತೆಯಲ್ಲಿ ರೂಢವಾಗಿರುವ ಗಾದೆಗಳು ಆಯಾ ಭಾಷೆಗಳ ವಿಶಿಷ್ಟ ಸೊತ್ತೆಂದು ಹೇಳಬೇಕು. ಅಂತಹ ಸೊತ್ತನ್ನು ಕುಮಾರವ್ಯಾಸ ವಿಫುಲವಾಗಿ ಬಳಸಿಕೊಂಡಿದ್ದಾನೆ. ನಲುವರ ನಡುಗಣ ಹಾವು ಸಾಯದು ಎಂಬಂತಹ ಗಾದೆಗಳು ಅರ್ಥ ಸ್ವಾರಸ್ಯವನ್ನು ಕಟ್ಟಿಡುವಂತಹವುಗಳಾಗಿವೆ.

ಕುಮಾರವ್ಯಾಸನ ಭಾಷಾ ಶೈಲಿಯು ಅದ್ವಿತೀಯವಾದುದು ಆತನ ಬರವಣಿಗೆಯಲ್ಲಿ ಮಾತುಗಳ ಜೀವನಾಡಿಯನ್ನು ಹಿಡಿದು ಮಿಡಿಸಬಲ್ಲ ರಸಜ್ಞ, ಆತ **'ಕಡ್ಡಿ ತಡೆವುದೇ ಕಡಲ ? ; 'ಕುರುಬರೂರಲಿ ಗಾಜು ಮಾಣಿಕ್ಯ' 'ಎಳಲತೆಯಕುಡಿ ಮಾಳಿಗೆಗೆ ತೊಲೆಯೆ ?'** ಇಂತಹ ಸೂಕ್ತಿಗಳನ್ನು ಯಥೇಚ್ಚವಾಗಿ ನೀಡಿ ಆತನು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾನೆ.

ಈತನ ಜನಪ್ರಿಯತೆಗೆ ಅವನ ಉತ್ತಮ ಪಾತ್ರ ಸೃಷ್ಟಿ. ಉದಾತ್ತ ಭಾವನೆಗಳು. ಯಥಾರ್ಥ ವರ್ಣನೆಗಳು. ನುಡಿಯ ಮೇಲಿನ ಅನುಪಮವಾದ ಅಧಿಕಾರ, ಭಕ್ತಿಯ ಆವೇಶ, ಸಂಗ್ರಾಮದ ಕೆಚ್ಚು, ರಸಿಕತೆ. ಹಾಸ್ಯಪ್ರಿಯತೆ, ಇವೆಲ್ಲಾ ಆತನ ಘನತೆಗೆ ಇಟ್ಟ ಕಳಸವಾಗಿವೆ.

ಅವನ ಕಾವ್ಯ ಶೈಲಿಯಲ್ಲಿ ದೋಷಗಳಿರಬಹುದು. ಆದರೆ ಅವನದು ಜೀವಂತ ಶಕ್ತಿಯುತ ಶೈಲಿಯಾಗಿದೆ. ಕುಮಾರವ್ಯಾಸನ ಕಾವ್ಯ ಶೈಲಿಗೆ ಮನಸೋತು ಬಿ.ಎಂ. ಶ್ರೀಯವರು **"ಕುಮಾರವ್ಯಾಸನು ನಮ್ಮ ಕವಿಗಳಲ್ಲಿ ಹಿರಿಯತಲೆ, ಸಾಹಿತ್ಯ ಉತ್ತಮ ರತ್ನಗಳಲ್ಲಿ ನಾಯಕರತ್ನ, ಪಂಪ, ರನ್ನ, ಬಸವಣ್ಣ, ಹರೀಶ್ವರ, ಪುರಂದರ, ಲಕ್ಷ್ಮೀಶರ ಜೊತೆಯಲ್ಲಿ ನಾರಾಯಣನನ್ನು ನಿಲ್ಲಿಸಿ ಕೈಯಲ್ಲಿ ಕನ್ನಡ ಭಾವುಟವನ್ನು ಕೊಟ್ಟು ಲೋಕದ ಯಾವ ದೊಡ್ಡ ಕವಿಯನ್ನಾದರೂ ಧೈರ್ಯದಿಂದ ಪ್ರೇಮದಿಂದ ಎದಿರುಗೊಳ್ಳಬಹುದು"** ಎಂದು ಹೃದಯಂಗಮವಾಗಿ ಹೊಗಳಿರುವುದು ಸಹಜವಾದುದಾಗಿದೆ. ಪಂಪನ ಸ್ವಭಾವೋಕ್ತಿ, ಬಸವಣ್ಣನವರ ನಿರ್ಮಲವಾದ ಹೃದಯದಿಂದ ಹೊರಟ ವಾಸನಾ ಸುಧೆ, ಕುಮಾರವ್ಯಾಸನ ಕನ್ನಡದ ಕೆಚ್ಚು ಇವು ಕನ್ನಡಿಗರ ಜನಮನದಿಂದ ಎಂದಿಗೂ ಅಳಿಯಲಾರದ ಅಳಿಸಲಾಗದ ಗುರುತುಗಳಾಗಿವೆ.

ದ್ರೌಪದಿಗೆ ಕೃಷ್ಣನ ಕೃಪೆಯಿಂದ ಅಕ್ಷಯ ಪಾತ್ರೆ ದೊರೆತಂತೆ, ಕುಮಾರವ್ಯಾಸನಿಗೆ ವೀರನಾರಾಯಣನ ಕರುಣೆಯಿಂದೆ ಕನ್ನಡ ದೇಸಿಯ ಅಕ್ಷಯ ಸಂಪತ್ತೆ ದೊರೆತಿದೆ. ಸಹಜ ಸಾಮರ್ಥ್ಯ, ಸುಲಭ ಮೃದುವಾದ ಘನತೆ, ರೂಪಕ ವೈಭವವನ್ನು ಅಚ್ಚರಿಯಾಗಿ ಮೆರೆದವರಲ್ಲಿ ಕುಮಾರವ್ಯಾಸನೊಬ್ಬನು, **"ಗಂಡರೈವರು ಮೂರು ಲೋಕದ, ಗಂಡರೊಬ್ಬ ನಾಳ ಲಾರಿರಿ"** ಎಂಬ ದ್ರೌಪದಿಯ ಮಾತಿಗೆ ಭೀಮನ ರೋಷದ ಜ್ವಾಲೆ ಸಿಡಿಯುವ ಪ್ರಖರತೆ **"ಹಿಂಡಿದನು ಹಗೆಗಳನು ಮನದೊಳಗೆ"** ಎಂಬ ಕ್ರಿಯೆ ಪ್ರತಿಕ್ರಿಯೆಯೂ ಕನ್ನಡ ದೇಸಿಯನ್ನು ಉಜ್ವಲಗೊಳಿಸಿದೆ.

ಹೀಗೆ ಕುಮಾರವ್ಯಾಸನ ವ್ಯಕ್ತಿತ್ವವನ್ನು ಬಿ. ಎಂ. ಶ್ರೀ ಯವರು ಸಂಗ್ರಾಹ್ಯವಾಗಿ **"ನಮ್ಮ ದಿವ್ಯಕವಿ, ನಮ್ಮವನು ಕನ್ನಡಿಗನು, ಕನ್ನಡಿಗರ ಕುಲವನ್ನು ಒಂದಾಗಿ ಬೆಸೆಯುವವನು, ಕನ್ನಡಿಗರ ದೊಡ್ಡ ಹೆಮ್ಮೆ, ದೊಡ್ಡ ಕಣ್ಣು, ಮಾಹಾತ್ಮ -- ಕನ್ನಡ ಕಾವ್ಯ ದೃಷ್ಟಿಯ ಕಾಮನಬಿಲ್ಲಿನಲ್ಲಿ ಈತನ ನೆಲೆ ನಟ್ಟ ನಡು ನೆತ್ತಿಯ ಮುಡಿ. ಹಳೆಯ ಹೊಸ ಕನ್ನಡದ ತಲೆಯ ಕಿರೀಟ, ನಾಡು ನುಡಿ ಮುಳುಗಿ ರೋಮಾಂಚನಗೊಳ್ಳುವಂತೆ ರಸವನ್ನು, ಇಂಪನ್ನು – ಲಯವನ್ನು, ತಾನವನ್ನು ಮಾತಿನ ಹರಹನ್ನು, ಛಂದಸ್ಸಿನ ಕುಣಿತವನ್ನು ಲೀಲಾಜಾಲವಾಗಿ ಹೊಮ್ಮಿಸಿ ಹರಿಯಿಸಿದ ಮಾಟಗಾರ, ಕನ್ನಡದ ಹೊಸ ಹುಟ್ಟಿನಲ್ಲಿ, ಹೊಸ ಮಾರ್ಗಕ್ಕೆ, ಹೊಸ ಶಕ್ತಿಗೆ ದಿಕ್ಸೂಚಿ, ದೃವತಾರೆ"** ಎಂದಿರುವುದು ಔಚಿತ್ಯ ಪೂರ್ಣವಾಗಿದೆ.

ರತ್ನಾಕರವರ್ಣಿ :

ಕನ್ನಡ ಸಾಹಿತ್ಯ ಚರಿತ್ರೆಯ ಉತ್ತುಂಗ ಶಿಖರಗಳಲ್ಲಿ ರತ್ನಾಕರನೊಬ್ಬ ಮಹಾಕವಿ. ಜೈನ ಕವಿಗಳಲ್ಲಿ ದೇಸಿ ಸಾಹಿತ್ಯ ಸೃಜಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಈತನ ವಿಚಾರದ ಬಗೆಗೆ ದೇವಚಂದ್ರನ 'ರಾಜಾವಳಿ' ಕಥೆಯಿಂದ ಕೆಲ ಅಂಶಗಳು ತಿಳಿಯುತ್ತವೆ. ೧೬ನೇ ಶತಮಾನಕ್ಕೆ ಸೇರಿದವನಾಗಿದ್ದು, 'ಮೂಡಬಿದಿರೆ' ಈತನ ಜನ್ಮ ಸ್ಥಳ 'ಚಾರುಕೀರ್ತಿ ಆಚಾರ್ಯ' ಇವನ ದೀಕ್ಷಾಗುರು ಕಾರ್ಕಳದ ಅರಸು ಭೈರವರಾಜನ ಆಸ್ಥಾನಿಕನಾಗಿ 'ಶೃಂಗಾರಕವಿ' ಎಂಬ ಬಿರುದು ಪಡೆದಿರುವನು. 'ಭರತೇಶವೈಭವ' **'ತ್ರಿಲೋಕ ಶತಕ' 'ರತ್ನಾಕರಧೀಶ್ವರ ಶತಕ' 'ಅಪರಾಜಿತೇಶ್ವರ ಶತಕ'** ಇವು ಈತನ ಕೃತಿಗಳಾಗಿವೆ. 'ಭರತೇಶವೈಭವ' ಒಂದು ಅಮೂಲ್ಯ ಸಾಂಗತ್ಯ ಕೃತಿಯಾಗಿದೆ. ಈತನ ಶತಕಗಳ ಉದ್ದೇಶ, ನೀತಿ, ಭಕ್ತಿ, ವೈರಾಗ್ಯ, ಸಂಸಾರದ ದಾರುಣತೆ, ಲೌಕಿಕತೆಯ ನಶ್ವರತೆಯನ್ನು ಸಾದರಪಡಿಸುವುದಾಗಿದೆ. ತ್ರಿಲೋಕ ಶತಕದಲ್ಲಿ ನೂರಕ್ಕೂ ಹೆಚ್ಚು 'ಕಂದ ಪದ್ಯಗಳಿದ್ದು ಮೂರು ಲೋಕದ ಸೃಷ್ಟಿ ಸ್ಥಿತಿಯ ವಿರಾಟ ರೂಪ ವರ್ಣನೆಯಿದೆ. **'ಅಣ್ಣನ ಪದಗಳು'** ಎಂಬ ಹಾಡು ರೂಪಕಗಳಿದ್ದು ನೀತಿತತ್ತ್ವ ಬೋಧಕಗಳಾಗಿವೆ.

ಭರತೇಶ ವೈಭವದಲ್ಲಿ ತ್ರಿಷಷ್ಠಿಶಲಾಕ ಪುರುಷರಲ್ಲೊಬ್ಬನಾದ ಭರತ ಚಕ್ರವರ್ತಿಯ ಕಥೆಯ ವರ್ಣನೆಯಿದೆ ಭರತೇಶ ಪ್ರಥಮ ತೀರ್ಥಂಕರನಾದ ವೃಷಭ ದೇವನ ಹಿರಿಯಮಗ ಪ್ರಥಮ ಚಕ್ರವರ್ತಿ ಹದಿನಾರನೆಯ ಮನುಷಟ್ಖಂಡಗಳ ಒಡೆಯ, ತೊಂಭತ್ತಾರು ಸಾವಿರ ಮಡದಿಯರ ಒಡೆಯ, ಬಹುಪುತ್ರವಂತ, ಭಾಗ್ಯವಂತ, ರಾಗರಸಿಕ, ವೀತರಾಗರಸಿಕ, ರಾಜಯೋಗಿ, ಚರಮದೇಹದಾರಿ ಜೊತೆಗೆ ಒಳ್ಳೆಯ ಶ್ರಾವಕ, ಜನಸಮೂಹಕ್ಕೆ ತರದಂತ ಭರತೇಶನ ಭವ್ಯಮೂರ್ತಿ ಕಲ್ಪನೆ ಆದರ್ಶ ಜೀವನದ ಯೋಗ – ಭೋಗ ಸಮನ್ವಯ ಸಾಧನೆಯ ಸಿದ್ಧಿಯ ಅದ್ಭುತದರ್ಶನ ಕನ್ನಡ ಸಾಹಿತ್ಯದಲ್ಲೇ ಅನನ್ಯವಾದುದು.

ರತ್ನಾಕರವರ್ಣಿಯ ೮೦ ಸಂಧಿ ಮತ್ತು ಸುಮಾರು ೧೦.೦೦೦ ಸಾಂಗತ್ಯ ಪದ್ಯಗಳುಳ್ಳ ತನ್ನ ಕೃತಿಯನ್ನು ೯ ತಿಂಗಳಲ್ಲಿ ಬರೆದು ಮುಗಿಸಿರುವದೊಂದು ವಿಸ್ಮಯವೇ ಆಗಿದೆ. ತನ್ನ ಕೃತಿಯ ಕಥೆಯನ್ನು ಕುರಿತು ಗಣನೆಯಿಲ್ಲದ ರಾಜ್ಯ ಸುಖಗಳಲ್ಲಿ ಒದ್ದಾಡಿ, ಭೂಮಂಡಲ ಮೆಚ್ಚುವೋಪಾದಿಯಲ್ಲಿ ಜಿನಯೋಗಿಯಾದ ವೈಭವದ ಸ್ವರೂಪವನ್ನು ಸಾರುವೆನೆಂದಿರುವದು ರತ್ನಾಕರನ ವಿಶೇಷತೆಯಾಗಿದೆ.

"ಆಗಮವಧ್ಯಾತ್ಮವಳವಟ್ಟ ಶೃಂಗಾರ
ತ್ಯಾಗದ ಭೋಗದ ಮೋಡಿ ಮೆರೆಯೆ
ಭೋಗಿಯೋಗಿಗಳೆದೆ ಜುಮುಜುಮ್ಮೆನೆ ನೇಮ
ದಾಗಿ ಸೊಲ್ಲಿಸುಪಿನಾಲಿಸಿರೊ . . . .

ಎಂದಿದ್ದಾನೆ. ಜಿನಯೋಗಿ ಭರತಚಕ್ರವರ್ತಿಯ ಸಮ್ಯಕ್ ಜೀವನದ, ತ್ಯಾಗ ಭೋಗಗಳ ಸಮನ್ವಯ ವೈಭವವೆಂಬುದು ಸ್ಪಷ್ಟವಾಗಿದೆ. ಜನಸಾಗುವ ಜೀವಿಗೆ ಮಾತ್ರ ಮೀಸಲಾದ ಪಂಚಕಲ್ಯಾಣಗಳಿಗೆ ಪರ್ಯಾಯವಾಗಿ "ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಅರ್ಕಕೀರ್ತಿವಿಜಯ, ಮೋಕ್ಷ ವಿಜಯಗಳೆಂಬ ೫ ವಿಜಯಗಳಲ್ಲಿ ಭರತ ಚಕ್ರವರ್ತಿಯ ಕಥೆಯನ್ನು ರಚಿಸಿದ್ದಾನೆ. ರತ್ನಾಕರನ ಭರತೇಶ 'ಉಂಡುಪವಾಸಿ ಬಳಸಿ ಬ್ರಹ್ಮಚಾರಿ' ಸಂಸಾರ ಸುಖವನ್ನು ತಿರಸ್ಕರಿಸಿ ಸಂಪ್ರದಾಯಕ್ಕೆ ಅಡ್ಡಿಯಾದವನಲ್ಲ.

"ಬೇಕಾದರಾಡಿಸಿ ಗಾಳಿಪಟವನರ್ತಿ
ಸಾಕಾಗೆ ಸುರುಳುವನಂತೆ
ನೂಕಿ ಬಿತ್ತುವ ಹೊರಗಾಡಿಸುವನು ತನ್ನೊ
ಳೇಕ ವಾಗಿರಿಸುವನೊಮ್ಮೆ"

ಎಂಬಲ್ಲಿ ಆತನ ಆತ್ಮವೈಭವದ ಪರಿಸ್ಫುಟವಿದೆ, ಭರತೇಶನು ತನ್ನ ರಾಣಿಯಾದ ಕುಸುಮಾಜಿಯ ತಂಗಿ ಮಕರಂದಾಜಿಯೊಡನೆ ಗೈದ ಶುಚಿನಗೆಯಾಟ, ಸರಸ ಸಲ್ಲಾಪ ಬಹುರಸವತ್ತಾಗಿ ನಕ್ಕುನಗಿಸುವಂತಹದ್ದು ಇದೇ ಉತ್ತಮ ಸಂಸ್ಕೃತಿಯ ಕುರುಹಾಗಿ ಹೊರಹೊಮ್ಮಿದೆ. ಸನ್ಮಾನ ಸಂಧಿ–ವೀಣಾಸಂಧಿಯಲ್ಲಿ–ಭರತೇಶ– ಕುಸುಮಾಜಿಯರ ದಿವ್ಯಪ್ರಣಯ ಸುರುತ ಪರಕಾಷ್ಠತೆಯನ್ನು ಮುಟ್ಟಿದೆ. ಭರತೇಶ ವೈಭವದಲ್ಲಿ ರತ್ನಾಕರವರ್ಣಿ ಓದಿದವರಿಗೆ ಒಬ್ಬ ರಸಿಕರಸ ಜೀವಿಯಾಗಿದ್ದಾನೆಂದು ಸುಸ್ಪಷ್ಟವಾಗಿ ಗೊತ್ತುಪಡಿಸುತ್ತಾನೆ. ಕವಿಯು ಇಲ್ಲಿ **ಭೋಗಾಂಗ, ಯೋಗಾಂಗ, ತ್ಯಾಗಂಗ** ಎಂಬ ಅಂಗತ್ರಯಗಳನ್ನು ಯೋಗ ಭೋಗಗಳ ಸಾಮರಸ್ಯಸಿದ್ಧಾಂತವನ್ನು ಅಳವಡಿಸಿದ್ದಾನೆ.

ಭರತೇಶವೈಭವದ 'ಭೋಗವಿಜಯ' ಅತ್ಯಂತ ರಸವತ್ತಾದದು – ಕಥಾನಾಯಕನ ಭೋಗಸಾಮ್ರಾಜ್ಯದ ರಸಚಿತ್ರವನ್ನು ಹೃದಯಂಗಮವಾಗಿ ಚಿತ್ರಿಸುತ್ತದೆ. ತೀರ್ಥಂಕರನು 'ಗರ್ಭಾವತರಣಕಲ್ಯಾಣ' ದಲ್ಲಿ ಅನುಭವಿಸಬಹುದಾದ ಸ್ವರ್ಗಸುಖದ

Scanned with CamScanner

ನೆತ್ತಿಯ ಮೇಲೆ ಬಡಿದಂತಿದೆ ಇದು ಕವಿಯು ಇಲ್ಲಿ ತನ್ನ ಸೃಷ್ಟಿಶಕ್ತಿಯೆಲ್ಲವನ್ನು ವಿನಿಯೋಗಿಸಿ, ಒಂದು ಶೃಂಗಾರರಸದ ಸಾಗರವನ್ನು ನಿರ್ಮಿಸಿದ್ದಾನೆ. ಭೋಗವಿಜಯವು ಕವಿಯ ಕಲ್ಪನೆಯಲ್ಲಿ ಅರಳಿರುವ ಒಂದು ಸುಂದರ ಹೊಂಗನಸು.

ರತ್ನಾಕರನು 'ದಿಗ್ವಿಜಯಪರ್ವದಲ್ಲಿ' ಸಂಪ್ರದಾಯ ಕಥೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಿದ್ದಾನೆ. ಅದರಲ್ಲಿ ಬಹುಮುಖ್ಯವಾದುದು ಇಲ್ಲಿಯ ಬಾಹುಬಲಿ ಪ್ರಸಂಗ. ಭರತನು ಜಗತ್ತನ್ನೆಲ್ಲ ಗೆದ್ದು ರಾಜಧಾನಿಗೆ ಹಿಂದಿರುವಾಗ ಆತನ ತಮ್ಮನಾದ ಬಾಹುಬಲಿ – ಪರ್ದಿಪುರದ ರಾಜ – ಅಣ್ಣನಿಗೆ ಶರಣಾಗಲು ನಿರಾಕರಿಸುತ್ತಾನೆ. ಇದರಿಂದ ಅವರಿಬ್ಬರಿಗೂ ಮಲ್ಲಯುದ್ಧ, ದೃಷ್ಟಿಯುದ್ಧ, ಜಲಯುದ್ಧಗಳಾಗುತ್ತವೆ. ಭರತಸೋಲುತ್ತಾನೆ. ತನ್ನ ಚಕ್ರವನ್ನು ಪ್ರಯೋಗಿಸುತ್ತಾನೆ. ಅದು ವ್ಯರ್ಥವಾದಾಗ ನಾಚಿಕೆಯಿಂದ ತಲೆತಗ್ಗಿಸುತ್ತಾನೆ. ಇದನ್ನು ಕಂಡು ಮನಕರಗಿದ ಬಾಹುಬಲಿ ಅಣ್ಣನಿಗೆ ರಾಜ್ಯವನ್ನು ಕೊಟ್ಟು ತಪಸ್ಸಿಗೆ ಹೊರಟುಹೋಗುತ್ತಾನೆ. ಸಂಪ್ರದಾಯ ಈ ಕಥೆಯನ್ನು ರತ್ನಾಕರ ಬದಲಾಯಿಸಿ ಯುದ್ಧದ ಪ್ರಸಕ್ತಿಯನ್ನೆ ನಿವಾರಿಸಿದ್ದಾನೆ. ರತ್ನಾಕರನ ಉಳಿದ ಮೂರು ವಿಜಯಗಳಲ್ಲಿ ಮೂಲ ಕಥೆಯಿಂದ ಹೆಚ್ಚು ಬದಲಾವಣೆಗಳೇನೂ ಇಲ್ಲ.

Scanned with CamScanner